**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಜಲ ಜೀವನ್ ಮಿಷನ್ ಕಾರ್ಯಕ್ರಮದಡಿ ಕೈಗೊಂಡಿರುವ ಕಾಮಗಾರಿಗಳ ಪ್ರಗತಿ ಮತ್ತು ಗುಣಮಟ್ಟದ ಪರಿಶೀಲನೆಗಾಗಿ ತಾಂತ್ರಿಕ ಸಮಿತಿ ರಚಿಸುವ ಕುರಿತು.

**ಓದಲಾಗಿದೆ:** ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಬೆಂಗಳೂರು ರವರ ಕಡತ ಸಂ:ಗ್ರಾಕುನೀ&ನೈಇ/ ಮುಇ/ಟೆಕ್/48/ 2022–23.

---

**ಪೀಠಿಕೆ:**

ಕೇಂದ್ರ ಸರ್ಕಾರವು ಜಲ ಜೀವನ್ ಮಿಷನ್ ಎಂಬ ಕಾರ್ಯಕ್ರಮವನ್ನು ದಿನಾಂಕ:15.08.2019ರಂದು ಘೋಷಿಸಿದ್ದು, ಈ ಕಾರ್ಯಕ್ರಮದ ಮೂಲಕ ರಾಜ್ಯದ ಎಲ್ಲಾ ಗ್ರಾಮೀಣ ಪ್ರದೇಶಗಳ ಮನೆಗಳಿಗೆ ಕಾರ್ಯಾತ್ಮಕ ನಳ ನೀರು ಸಂಪರ್ಕವನ್ನು(FHTC) ಕಲ್ಪಿಸುವ ಯೋಜನೆ ಹೊಂದಿದ್ದು, ಸದರಿ ಕಾರ್ಯಕ್ರಮದ ಕಾರ್ಯಕಾರಿ ಮಾರ್ಗಸೂಚಿಯನ್ನು ಡಿಸೆಂಬರ್–2019ರಲ್ಲಿ ಹೊರಡಿಸಲಾಗಿದೆ. ರಾಜ್ಯದಲ್ಲಿ ಈ ಕಾರ್ಯಕ್ರಮವನ್ನು **"ಮನೆ ಮನೆಗೆ ಗಂಗೆ"** ಎಂಬ ಯೋಜನೆ ಮೂಲಕ 55 LPCD ಯಂತೆ ಪ್ರತಿ ವ್ಯಕ್ತಿಗೆ ಕುಡಿಯುವ ನೀರು ಒದಗಿಸಲು ಜಾರಿಗೆ ತರಲಾಗಿದೆ. ಸದರಿ ಯೋಜನೆಯನ್ನು 2024ರೊಳಗಾಗಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಪ್ರಸ್ತುತ ಈಗಾಗಲೇ ಕಾಮಗಾರಿಗಳನ್ನು ಪ್ರಾರಂಭಿಸಿದ್ದು, ಬ್ಯಾಚ್–1, 2 ಮತ್ತು 3ರಲ್ಲಿ 5252125 ಮನೆಗಳಿಗೆ ಕಾರ್ಯಾತ್ಮಕ ನಳ ನೀರು ಸಂಪರ್ಕ (FHTC) ಕಲ್ಪಿಸಿದ್ದು, ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತವೆ. ಅದರ ಪ್ರಗತಿ ಮತ್ತು ಕಾಮಗಾರಿಯ ಗುಣಮಟ್ಟದ ಪರಿಶೀಲನೆಗಾಗಿ **"ತಾಂತ್ರಿಕ ಸಮಿತಿ"ಯನ್ನು** ರಚಿಸಲು ತೀರ್ಮಾನ ಕೈಗೊಳ್ಳಲಾಗಿದೆ. ತಾಂತ್ರಿಕ ಸಮಿತಿಯಲ್ಲಿ ಅಧಿಕಾರೇತರ ಸದಸ್ಯರುಗಳಿಗೆ ಪ್ರತಿ ಸಭೆಗೆ ಗೌರವ ಸಂಭಾವನೆ ಹಾಗೂ **ಗ್ರೂಪ್** – ಎ ಅಧಿಕಾರಿಗಳಿಗೆ ಲಭ್ಯವಿರುವ ಪ್ರವಾಸ ಭತ್ಯೆಗಳನ್ನು ನೀಡಬಹುದಾಗಿದೆ. ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಕುನೀ&ನೈಇ 279 ಗ್ರಾನೀಸ(4) 2022 ಬೆಂಗಳೂರು, ದಿನಾಂಕ:25.05.2022.** 636

ಪೀಠಿಕೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಜಲ ಜೀವನ್ ಮಿಷನ್ ಕಾರ್ಯಕ್ರಮದಡಿ ಕೈಗೊಂಡಿರುವ ಕಾಮಗಾರಿಗಳ ಪ್ರಗತಿ ಮತ್ತು ಗುಣಮಟ್ಟದ ಪರಿಶೀಲನೆಗಾಗಿ **"ತಾಂತ್ರಿಕ ಸಮಿತಿ"ಯನ್ನು** ಈ ಕೆಳಕಂಡಂತೆ ತಂಡ ರಚಿಸಲು ಆದೇಶ ಹೊರಡಿಸಲಾಗಿದೆ.

| ಕ್ರಸಂ | ಅಧಿಕಾರಿಗಳ ಹೆಸರು | ಪದನಾಮ |
|---|---|---|
| 1. | ಡಾ॥ ಹೆಚ್.ಎಸ್. ಪ್ರಕಾಶ್ ಕುಮಾರ್, ಆಯುಕ್ತರು(ನಿವೃತ್ತ), ಗ್ರಾ.ಕು.ನೀ.&ನೈ.ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಸಲಹೆಗಾರರು (ಜೆ.ಜೆ.ಎಂ) | ಅಧ್ಯಕ್ಷರು |
| 2. | ಶ್ರೀ ಎಂ. ಗಣೇಶ್, ಪ್ರಧಾನ ಇಂಜಿನಿಯರ್ (ನಿವೃತ್ತ), ಜಲಸಂಪನ್ಮೂಲ ಇಲಾಖೆ, | ಸದಸ್ಯರು |
| 3. | ಶ್ರೀ ಎನ್. ನಾಗಣ್ಣ, ಮುಖ್ಯ ಇಂಜಿನಿಯರ್ (ನಿವೃತ್ತ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, | ಸದಸ್ಯರು |
| 4. | ಶ್ರೀ ಬಸವರಾಜ್ ಕೋಟಿ, ನಿರ್ದೇಶಕರು (ನಿವೃತ್ತ), ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ(KERS) | ಸದಸ್ಯರು |
| 5. | ಶ್ರೀ ಎಂ.ಬಿ. ಬುರ್ಜಿ, ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿ(ನಿವೃತ್ತ), ಲೋಕೋಪಯೋಗಿ ಇಲಾಖೆ, | ಸದಸ್ಯರು |
| 6. | ಅಧೀಕ್ಷಕ ಅಭಿಯಂತರರು–1, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಕೇಂದ್ರ ಕಛೇರಿ, ಬೆಂಗಳೂರು. | ಸದಸ್ಯ ಕಾರ್ಯದರ್ಶಿ |

2. ಸದರಿ ಪರಿಶೀಲನೆ ಕಾರ್ಯಕ್ಕಾಗಿ ಸಮಿತಿಯ ಸದಸ್ಯರುಗಳಿಗೆ ಭತ್ಯೆಗಳನ್ನು ಈ ಕೆಳಗಿನಂತೆ ನೀಡತಕ್ಕದ್ದು.

ಅ) ಪ್ರತಿ ಸಭೆಯಲ್ಲಿ ಭಾಗವಹಿಸುವವರಿಗೆ – ರೂ.5,000/– ಗೌರವ ಸಂಭಾವನೆ

ಆ) ದಿನಭತ್ಯೆ ಗರಿಷ್ಠ (DA) – ರೂ.2,500/– ಅಥವಾ ವಾಸ್ತವ್ಯದ ಪ್ರಕಾರ

ಇ) ಪ್ರಯಾಣ ಭತ್ಯೆ (TA) – ಪ್ರವಾಸ ಭತ್ಯೆಗಾಗಿ ವಾಸ್ತವಿಕ ದರ ಅಥವಾ ವಿಮಾನ ಪ್ರಯಾಣ / ರೈಲ್ವೆ 1ನೇ ದರ್ಜೆ ದರಕ್ಕೆ ಅರ್ಹರಾಗಿರುತ್ತಾರೆ.

3. ಸದರಿ ಸಮಿತಿಯು ಸಭೆ ಸೇರಿ ಮತ್ತು ಅವಶ್ಯಕತೆಯಿದ್ದಲ್ಲಿ ಬಹುಗ್ರಾಮ ಕುಡಿಯುವ ನೀರಿನ ಪುನಃಶ್ಚೇತನ ಕಾಮಗಾರಿಗಳ ಸ್ಥಳಕ್ಕೆ ಭೇಟಿ ನೀಡಿ ಜಲಮೂಲ ಲಭ್ಯ, ನೀರಿನ ಪರಿಮಾಣ, ಲಭ್ಯತೆಯ ಅವಧಿ, ವಿದ್ಯುತ್ ಸಂಪರ್ಕದ ಸೌಕರ್ಯ, ಹಾಲಿ ಇರುವ ಮೂಲಭೂತ ಸೌಕರ್ಯಗಳು, ಶುದ್ಧೀಕರಣ ಘಟಕ, ಸಂಪು, ಜಲಸಂಗ್ರಹಾಲಯಗಳು ಮತ್ತು ಕಾರ್ಯಾತ್ಮಕ ನಳ ಸಂಪರ್ಕ ಕಲ್ಪಿಸುವ ಕಾಮಗಾರಿಗಳ ಪರಿವೀಕ್ಷಣೆ ನಡೆಸಿ ವರದಿಯನ್ನು CE,RDWSD ಬೆಂಗಳೂರುರವರಿಗೆ ನೀಡತಕ್ಕದ್ದು.

4. ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಪರಿವೀಕ್ಷಣಾ ಸಮಯದಲ್ಲಿ ಅಲ್ಲಿನ ಪ್ರಯೋಗಾಲಯಗಳಿಗೆ ಭೇಟಿ ನೀಡಿ ನೀರಿನ ಗುಣಮಟ್ಟದ ಪರೀಕ್ಷಾ ವರದಿಯನ್ನು ಪರಿಶೀಲಿಸುವುದು.

5. ಯೋಜನೆಯ ಅನುಷ್ಠಾನದ ಅಥವಾ ಪೂರ್ಣಗೊಂಡ ನಂತರ ಸ್ಥಳಕ್ಕೆ ಭೇಟಿ ನೀಡಿದ್ದಲ್ಲಿ, ಸಂಬಂಧಪಟ್ಟ ಉಪ ವಿಭಾಗದ ಅಧಿಕಾರಿಗಳಿಗೆ ತಾಂತ್ರಿಕವಾಗಿ ಸಲಹೆಗಳನ್ನು ನೀಡತಕ್ಕದ್ದು.

6. ಮೇಲ್ಕಂಡ ತಂಡವು ಉದ್ದೇಶಿತ ಯೋಜನೆಗಳ ಪ್ರಗತಿ ಪರಿಶೀಲನೆ ಹಾಗೂ ಕಾಮಗಾರಿಯ ಗುಣಮಟ್ಟವನ್ನು ಪರಿಶೀಲಿಸಿ, ನಂತರ ಕೈಗೊಂಡ ಪರಿಶೀಲನಾ ವರದಿಯನ್ನು ದಾಖಲೆಗಳೊಂದಿಗೆ CE,RDWSD ಬೆಂಗಳೂರು ಇವರಿಗೆ ನೀಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ನಿರ್ದೇಶಕರು
ಹಾಗೂ ಪದನಿಮಿತ್ತ ಉಪ ಕಾರ್ಯದರ್ಶಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

**ಪ್ರತಿಗಳು:**

1. ಮಹಾಲೇಖಪಾಲರು (ಲೆಕ್ಕಪತ್ರ –AG/A&E) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು–I – G&SSA- AUDIT) ಕರ್ನಾಟಕ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಗ್ರಾ.ಕು.ನೀ.&ನೈ. ಇಲಾಖೆ, 1ನೇ ಮಹಡಿ, ಕೆ.ಹೆಚ್.ಬಿ. ಕಟ್ಟಡ, ಕಾವೇರಿಭವನ, ಬೆಂಗಳೂರು ಇವರಿಗೆ ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
4. ಡಾ. ಹೆಚ್. ಎಸ್. ಪ್ರಕಾಶ್‌ಕುಮಾರ್ ನಿವೃತ್ತ ಆಯುಕ್ತರು, ಗ್ರಾ.ಕು.ನೀ.&ನೈ. ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಸಲಹೆಗಾರರು (ಜೆ.ಜೆ.ಎಂ.) ನಂ.1206, 4ನೇ ಮುಖ್ಯ ರಸ್ತೆ, ಇ–ಬ್ಲಾಕ್, ರಾಜಾಜಿನಗರ 2ನೇ ಹಂತ, ಬೆಂಗಳೂರು–560 010.
5. ಶ್ರೀ ಎಂ. ಗಣೇಶ್, ಪ್ರಧಾನ ಇಂಜಿನಿಯರ್ (ನಿವೃತ್ತ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ನಂ.138, 23ಎ ಕ್ರಾಸ್, 21ನೇ ಮುಖ್ಯ ರಸ್ತೆ, ನ್ಯಾಯಾಂಗ ಬಡಾವಣೆ, ಜಿ.ಕೆ.ವಿ.ಕೆ. ಪೋಸ್ಟ್, ಯಲಹಂಕ ನ್ಯೂ ಟೌನ್, ಬೆಂಗಳೂರು–560065.

6. ಶ್ರೀ ಎನ್. ನಾಗಣ್ಣ, ಮುಖ್ಯ ಇಂಜಿನಿಯರ್ (ನಿವೃತ್ತ), ಜಲಸಂಪನ್ಮೂಲ ಇಲಾಖೆ, ನಂ.174, 7ನೇ ಕ್ರಾಸ್, 5–ಸಿ ಮುಖ್ಯ ರಸ್ತೆ, ಆರ್.ಪಿ.ಸಿ. ಬಡಾವಣೆ, ವಿಜಯನಗರ, ಬೆಂಗಳೂರು–560 040.
7. ಶ್ರೀ ಬಸವರಾಜ್ ಕೋಟಿ, ನಿರ್ದೇಶಕರು (ನಿವೃತ್ತ), ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ (KERS) ನಂ.690, 9ನೇ ಕ್ರಾಸ್, 10ನೇ ಮುಖ್ಯ ರಸ್ತೆ, ವಿಜಯನಗರ 1ನೇ ಹಂತ, ಮೈಸೂರು–570017.
8. ಶ್ರೀ ಎಂ.ಬಿ. ಬುರ್ಜಿ, ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿ (ನಿವೃತ್ತ) ಲೋಕೋಪಯೋಗಿ ಇಲಾಖೆ, ನಂ.852, 12ನೇ ಮುಖ್ಯ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ 2ನೇ ಹಂತ, ಬೆಂಗಳೂರು–560072.
9. ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
10. ರಾಜ್ಯದ (4) ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವೃತ್ತಗಳ ಅಧೀಕ್ಷಕ ಅಭಿಯಂತರರುಗಳು.
11. ಅಧೀಕ್ಷಕ ಇಂಜಿನಿಯರ್–1, ಗ್ರಾ.ಕು.ನೀ.&ನೈ. ಇಲಾಖೆ ಕೇಂದ್ರ ಕಛೇರಿ, ಬೆಂಗಳೂರು.
12. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
13. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
14. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ದಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ
15. ರಾಜ್ಯದ ಎಲ್ಲಾ (31) ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳ ಕಾರ್ಯಪಾಲಕ ಅಭಿಯಂತರರುಗಳು,
16. ನಿರ್ದೇಶಕರು, ಶ್ರೀ ಅಬ್ದುಲ್ ನಜೀರ್ ಸಾಬ್‌ರವರ ಗ್ರಾಮೀಣಾಭಿವೃದ್ಧಿ ರಾಜ್ಯ ಸಂಸ್ಥೆ, ಲಲಿತ್ ಮಹಲ್ ರಸ್ತೆ, ಮೈಸೂರು
17. ಆಂತರಿಕ ಆರ್ಥಿಕ ಸಲಹೆಗಾರರು, RDPR ಇಲಾಖೆ ಇವರ ಆಪ್ತ ಸಹಾಯಕರು
18. ಸಂಪಾದಕರು, "ಕರ್ನಾಟಕ ವಿಕಾಸ" ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
19. ಮುಖ್ಯ ಲೆಕ್ಕಾಧಿಕಾರಿ, ಗ್ರಾ.ಕು.ನೀ.&.ನೈ. ಇಲಾಖೆ, ಬೆಂಗಳೂರು.
20. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾ.ಅ.&.ಪಂ.ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು) ಬೆಂಗಳೂರು.
21. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ) ಬೆಂಗಳೂರು.
22. ಗ್ರಾಅಪಂ.ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು) ಬೆಂಗಳೂರು.
23. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.